Register Number:
Date: 17/11/2020

**ST. JOSEPH'S COLLEGE (AUTONOMOUS), BANGALORE-27**
**B.Sc. Kannada – 3rd SEMESTER**
**SEMESTER EXAMINATION: NOVEMBER 2020**
**KAS 318 – KANNADA**

**Time- 2 1/2 hrs** **Max Marks-70**

**This paper contains 2 printed pages and four parts**

**ಕೊಡಲಾದ ಸೂಚನೆಗಳನ್ನು ಅನುಸರಿಸಿ ಉತ್ತರಿಸಿ.**

**(ಅ) ಒಂದು ಪದ್ಯ ಭಾಗಕ್ಕೆ ಭಾವಾರ್ಥ ಬರೆಯಿರಿ:** **1x5=5**

1) ಮಡ್ಡಿ ಕಾಲಿಲ್ಲದ ಕುದ್ರೆಯ ಓಡುಸಲಾರಬವ್ವ
ರೆಕ್ಕೆ ಇಲ್ಲದ ಪಕ್ಷಿಯ ಅಂತರ್ದಲ್ಲಿ ಹಾರಸ್ಲಾರ ಬವ್ವ
ನಿನ್ನ ಹೆಣ್ಣೆಂಬ ಹೆಣ್ ಜಾತೀಯ ನಂಬ್ಲಾರಿ ನಚ್ಚಲಾರಿ
ನಿನ್ನ ಹೆಣ್ಣೀನ ಮಾಯ ತಿಳಿಯಲಾಗದು
ಬಲಗೈ ಭಾಷೆ ಮಾಡ್ವೆಣ್ಣೆ॥

2) ಮೊಟ್ಟೆಯಿಂದುದ್ಭವಿಸಿದುದು ಕೋಗಿಲೆಯ ಕಂದನಲ್ಲ
(ಸಾಮ್ಯವಾದದ ಮಹಿಮೆ! ಮೇಣದರ ಬೋಧ್ಯೆ !
ಸಂತಾನ ಪರಿಣಾಮವನು ಕಂಡು ಬೆರಗಾಗಿ ಹೋದೆ)
ಮೊಟ್ಟೆಯಿಂದೈತಂದುದೇನು ? ಪಿಕಶಿಶುವಲ್ಲ !
ಮೂಡಿಬಂದೆನ್ನ ಹಿಡಿದನು ಸೋವಿಯಟ್ಟೊಬ್ಬ ಗೂಢಚಾರ !
ಕೋಗಿಲೆಯ ಮೊಟ್ಟೆಯೊಳಗೂ ಕೂಡ ಸಾಮ್ಯವಾದ ಪ್ರಚಾರ !

**(ಆ) ಮೂರು ವಾಕ್ಯಗಳಿಗೆ ಸಂದರ್ಭವನ್ನು ವಿವರಿಸಿ:** **3x5=15**

3) ಮೈಯ್ಯ ಮುಟ್ಟಲು ತಡೆದುದಂದು ಜಾತಿ ಹೆಚ್ಚಿನ ಹೆಮ್ಮೆಯು
4) ಸೋವಿಯಟ್ ವೈಷ್ಣವರ ಧರ್ಮಕದು ಪರಮ ಪ್ರಪತ್ತಿ
5) ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದವು ಹೂವು
6) ನಿಮ್ಮ ನಡೆಮುಡಿಯ ಬಿಸುಟು ಹೋಗುತ್ತೇನೆ ಕದಳಿಗೆ
7) ಯಾವ್ದೇವ್ರೂ ಬಂದು ನನ್ನ ಕಷ್ಟವನ್ನು ಪಾರ್ ಮಾಡ್ಲಿಲ್ಲವಲ್ಲ
8) ಕೇಳಬಹುದೇ ಪತಿಯ ಕುರುಹ ; ಕುರುಹೇ ತಾನಾದ ನನ್ನನ್ನು

**II ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರಿಸಿ:** **2x10=20**

9) ಕರುಣೆ ಮತ್ತು ಅನುಕಂಪಗಳನ್ನು ಮೀರಿಸುವ ಪ್ರೀತಿಯ ಅನುಭವವನ್ನು "ನನ್ನ ನಾಯಿ" ಕವನದ ಮೂಲಕ ಪು.ತಿ.ನ ಚಿತ್ರಿಸುವ ಬಗ್ಗೆ ವಿವರಿಸಿ.

10) ಡಾ॥ ಸಿದ್ದಲಿಂಗಯ್ಯನವರು ಬರೆದ "ಜೋಮನ ಮಕ್ಕಳ ಹಾಡು" ಕವಿತೆಯಲ್ಲಿ ವ್ಯಕ್ತವಾಗುವ ಶೋಷಣೆ ಮತ್ತು ನೋವು ಎಂಥದ್ದು? ವಿಮರ್ಶಿಸಿ.

11) "ಕೋಗಿಲೆ ಮತ್ತು ಸೋವಿಯತ್ ರಷ್ಯಾ" ಕವನದಲ್ಲಿ ವರ್ಣಿತವಾಗಿರುವ ಸಾಮ್ಯವಾದದ ಪರಿ ಎಂಥದು? ವಿಮರ್ಶಿಸಿ.

12) ಸಂಕವ್ವೆಯನ್ನು ಅವಳ ಗಂಡ ಹೇಗೆಲ್ಲ ಕಾಡಿಸುತ್ತಾನೆ? ಅದಕ್ಕೆ ಅವಳ ಉತ್ತರವೇನು? ಚರ್ಚಿಸಿ.

**III ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **2x10=20**

13) "ವಿಜ್ಞಾನ ಮತ್ತು ಧರ್ಮ" ಪ್ರಬಂಧದಲ್ಲಿ ಇವೆರಡರ ನಡುವೆ ಇರುವ ಸಾಮರಸ್ಯ, ಮಾರ್ಗ, ಧ್ಯೇಯಗಳನ್ನು ಚಿ.ರಾಮಕೃಷ್ಣ ಅವರು ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.

14) ಪ್ರೀತಿಯು ಒಂದು ಕಲೆ ಎಂಬ ವಿಚಾರ ಧಾರೆಯನ್ನು ಎರಿಕ್ ಫ್ರಾಂ ತಮ್ಮ ಲೇಖನದಲ್ಲಿ ಹೇಗೆ ವಿಶ್ಲೇಷಿಸುತ್ತಾರೆ? ಚರ್ಚಿಸಿ.

15) ಸಾಹಿತ್ಯ ಮತ್ತು ಸಂಸ್ಕೃತಿ ಕಲೆಗಳೊಳಗೆ 'ಮಾವು' ಚಿತ್ರಣಗೊಂಡಿರುವ ಬಗೆಯನ್ನು "ಹುಳಿಮಾವು" ಪ್ರಬಂಧದಲ್ಲಿ ಬಿ.ಜಿ.ಎಲ್.ಸ್ವಾಮಿ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

16) ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ ಸಿಲುಕಿದ ಬುದ್ಧನ ಬದುಕನ್ನು ಲಂಕೇಶ್ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

**IV. ಒಂದು ವಾಕ್ಯದಲ್ಲಿ ಉತ್ತರಿಸಿ:** **1x10=10**

17) ಗಾಂಧಿ ಮತ್ತು ಬುದ್ಧರು ಮನುಕುಲಕ್ಕೆ ನೀಡಿದ ಕಾಣಿಕೆ ಯಾವುದು?
18) ಭಾರತ ಸ್ವಾತಂತ್ರ್ಯಗೊಂಡ ದಿನದಂದು ಸಂಭ್ರಮಿಸಿದ್ದು ಮತ್ತು ಒಬ್ಬಂಟಿಯಾಗಿದ್ದುದು ಯಾರು?
19) ಸತ್ಯಶೋಧಕ ಸಿದ್ಧಾರ್ಥನ ಎದುರು ಜನ ಸೇರುತ್ತಿದ್ದುದು ಇದಕ್ಕಾಗಿ. ಇದಕ್ಕಾಗಲ್ಲ?
20) ಯಾವ ಸಾಧನೆಯ ಸ್ಥಿತಿಯಿಂದ ಗೌತಮನಿಗೆ ಜ್ಞಾನೋದಯವಾಗಲಿಲ್ಲ?
21) ಚತುರ್ವೇದಗಳನ್ನು ಸಂಕೇತಿಸುವ ಮಾವಿನ ಮರದ ಬಗ್ಗೆ ಬರೆಯಿರಿ.
22) ಚರಕ ಸಂಹಿತೆಯ ಪ್ರಕಾರ ಮಾವಿನ ಪ್ರಯೋಜನವೇನು?
23) ಹಸಿ ಮಾಗಾಯಿನ ಭೋಜನ ವ್ಯಂಜನಗಳ್ಯಾವುವು?
24) ಎರಿಕ್ ಫ್ರಾಂನ ಬಗ್ಗೆ ನಿಮಗೇನು ಗೊತ್ತು ಬರೆಯಿರಿ.
25) ಆಲೂಗಡ್ಡೆ ಗಿಡದೆದುರು ಯಾರು? ಯಾಕೆ ನೃತ್ಯಮಾಡುತ್ತಾರಂತೆ?
26) ಏಂಗಲ್ಸ್ ಅವರು ಬರೆದ ಗ್ರಂಥದ ಹೆಸರೇನು?

-----------------------------------X-----------------------------------